# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 367(17) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸುವ ಸಚಿವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅನುಮೋದಿತ ಬಡಾವಣೆಗಳಿಗೆ ಅನುಮತಿ ನೀಡಲು ವಿಳಂಬ ಮಾಡುತ್ತಿರುವುದರಿಂದಾಗಿ ಅನುಮೋದಿತ ನಿವೇಶನಗಳ ಖರೀದಿದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | • ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(A) ರಂತೆ ಘೋಷಿಸಲಾದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ವಿನ್ಯಾಸ ಅನುಮೋದನೆ ಪಡೆಯಲು ಇಚ್ಚಿಸುವ ಭೂ ಮಾಲೀಕರು/ಬಡಾವಣೆ ಅಭಿವೃದ್ಧಿದಾರರು (Layout Developers) ನಿಯಮಾನುಸಾರವಾಗಿ ಕಾಯ್ದಿರಿಸಲಾದ ರಸ್ತೆ, ನಿವೇಶನ, ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ಕ್ಷೇತ್ರಗಳನ್ನು ಒಳಗೊಂಡ ವಿನ್ಯಾಸ ನಕ್ಷೆಯನ್ನು ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(1)**ರಂತೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.<br><br>• ಭೂ ಮಾಲೀಕರು ಪ್ರಾಧಿಕಾರಕ್ಕೆ ಸಲ್ಲಿಸಿರುವ ವಿನ್ಯಾಸ ನಕ್ಷೆಯು ಯೋಜನಾ ಬದ್ಧವಾಗಿರುವುದು ಕಂಡುಬಂದಲ್ಲಿ, ಸದರಿ ವಿನ್ಯಾಸ ನಕ್ಷೆಯಂತೆ, ಪ್ರಾಧಿಕಾರವು ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2)** ರಡಿಯಲ್ಲಿ, ನಿಗಧಿತ ಅವಧಿಯಲ್ಲಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬೇಕಾಗಿರುತ್ತದೆ. ಹಾಗೂ ಪ್ರಾಧಿಕಾರದ ವ್ಯಾಪ್ತಿಗೆ ಮಹಾಯೋಜನೆ ಅನುಮೋದನೆ ಆಗದೇ ಇರುವ ಜಮೀನುಗಳ ವಿನ್ಯಾಸಗಳಿಗೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಮಾರ್ಗದರ್ಶನದಂತೆ ಪ್ರಾಧಿಕಾರವು ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬೇಕಿರುತ್ತದೆ.<br><br>• ಪ್ರಾಧಿಕಾರವು ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಕಲಂ 17(2) ರಡಿಯಲ್ಲಿ, ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ತೀರ್ಮಾನಿಸಿದ್ದಲ್ಲಿ, ವಿನ್ಯಾಸವನ್ನು ನೆಲದಲ್ಲಿ ಗಡಿ ಗುರುತಿಸುವ ಸಂಬಂಧ (Demarcation purpose) ಹಾಗೂ ಅಭಿವೃದ್ಧಿಪಡಿಸುವ ಸಂಬಂಧ ವಿನ್ಯಾಸ ನಕ್ಷೆಗಳಿಗೆ |

| | | |
|---|---|---|
| | | ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2-A)** ರಡಿಯಲ್ಲಿ, ತಾತ್ಕಾಲಿಕವಾಗಿ ಅನುಮೋದನೆ ನೀಡಿ, ಆದೇಶ ಹೊರಡಿಸಬೇಕಿರುತ್ತದೆ.<br><br>• ಅನುಮೋದಿತ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳಾದ ವಿದ್ಯುತ್‌ಚ್ಛಕ್ತಿ, ಒಳಚರಂಡಿ, ನೀರು ಸರಬರಾಜು ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಭೂ ಮಾಲೀಕರು / ಬಡಾವಣೆ ಅಭಿವೃದ್ಧಿದಾರರು(Layout Developers) ಸಂಬಂಧಪಟ್ಟ ಇಲಾಖೆಗಳ ಮೇಲುಸ್ತುವಾರಿಯಲ್ಲಿ, ಪೂರ್ಣಗೊಳಿಸಬೇಕಿರುತ್ತದೆ.<br><br>• ನಂತರ ವಿನ್ಯಾಸದಲ್ಲಿನ ಉದ್ಯಾನವನ, ಹಾಗೂ ರಸ್ತೆ ಕ್ಷೇತ್ರಗಳನ್ನು/ಜಾಗವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ನಾಗರೀಕ ಸೌಲಭ್ಯ ನಿವೇಶನವನ್ನು ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪುಕ್ಕಟ್ಟೆಯಾಗಿ ಭೂ ಮಾಲೀಕರು / ಬಡಾವಣೆ ಅಭಿವೃದ್ಧಿದಾರರು(Layout Developers) ಹಸ್ತಾಂತರಿಸಿಬೇಕಿರುತ್ತದೆ.<br><br>• ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳು ಮುಕ್ತಾಯಗೊಂಡಿರುವ ಕುರಿತು ಪ್ರಾಧಿಕಾರವು ಸಂಬಂಧಪಟ್ಟ ಇಲಾಖೆಗಳ ಮೇಲ್ವಿಚಾರಣೆಯಲ್ಲಿ ವಿನ್ಯಾಸವನ್ನು ಪರಿಶೀಲಿಸಿ, ನಿರಾಕ್ಷೇಪಣಾ ಪತ್ರಗಳನ್ನು ಸದರಿ ಸಂಬಂಧಪಟ್ಟ ಇಲಾಖೆಗಳಿಂದ ಪಡೆದು ಈ ಕುರಿತು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ, ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2-B)** ರಡಿಯಲ್ಲಿ, ನಿಯಮಾನುಸಾರ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಬೇಕಿರುತ್ತದೆ.<br><br>• ಭೂ ಮಾಲೀಕರು ಬಡಾವಣೆ ಅಭಿವೃದ್ಧಿದಾರರು(Layout Developers) ಕೋರಿಕೆಯ ಮೇರೆಗೆ, ಪ್ರಾಧಿಕಾರವು ವಿನ್ಯಾಸದಲ್ಲಿನ ನಿವೇಶನಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2-C)** ರಡಿಯಲ್ಲಿ, ಎರಡು ಹಂತದಲ್ಲಿಯೂ ಸಹ ಬಿಡುಗಡೆಗೊಳಿಸಬಹುದಾಗಿರುತ್ತದೆ. ಮೊದಲನೆ ಹಂತದಲ್ಲಿ ಶೇ . 40 ರಷ್ಟು ನಿವೇಶನಗಳನ್ನು ಹಾಗೂ ಉಳಿದ ಶೇ. 60 ರಷ್ಟು ನಿವೇಶನಗಳನ್ನು ಎರಡನೇ |

| | | |
|---|---|---|
| | | ಹಂತದಲ್ಲಿ ನಿಯಮಾನುಸಾರವಾಗಿ ಬಿಡುಗಡೆಗೊಳಿಸಬಹುದಾಗಿರುತ್ತದೆ. ಸದರಿ ವಿಧಾನದಲ್ಲಿ, ಪ್ರಾಧಿಕಾರವು ಈ ಕೆಳಕಂಡಂತೆ ಕ್ರಮ ವಹಿಸಬೇಕಿರುತ್ತದೆ;<br>(ಅ) ಪ್ರಾಧಿಕಾರವು ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡಿದ ನಂತರ, ಭೂ ಮಾಲೀಕರಿಂದ ನೋಂದಾಯಿತ ಪರಿತ್ಯಜನಾ ಪತ್ರ, ವಿನ್ಯಾಸದಲ್ಲಿನ ಮೂಲೆ ನಿವೇಶನಗಳ ಕುರಿತಂತೆ ನೋಂದಾಯಿತ ಅಡಮಾನ ಒಪ್ಪಂದ (mortgage agreement) ಪಡೆದು, ಸದರಿ ವಿನ್ಯಾಸವು Real Estate (Regulation & Development) Act, 2016 (Central Act 16 of 2016) ರಡಿಯಲ್ಲಿ ನೋಂದಣಿಯಾಗಿರುವ ಕುರಿತು ಖಚಿತಪಡಿಸಕೊಳ್ಳಬೇಕಿರುತ್ತದೆ.<br><br>(ಆ) ನಂತರದಲ್ಲಿ, ಪ್ರಾಧಿಕಾರವು ಸದರಿ ದಾಖಲೆಗಳನ್ನು ಪಡೆದು, ವಿನ್ಯಾಸದಲ್ಲಿನ ಶೇ. 40ರಷ್ಟು ನಿವೇಶನಗಳನ್ನು (ಚದುರಿದಂತೆ) ಪ್ರಾಧಿಕಾರವು ಬಿಡುಗಡೆಗೊಳಿಸಿ, ಪ್ರಾಧಿಕಾರವು ತಾತ್ಕಾಲಿಕ ಅನುಮೋದನೆ ನೀಡಿದ ವಿನ್ಯಾಸ ನಕ್ಷೆಯ ಒಂದು ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಸದರಿ ನಿವೇಶಗಳ ನೋಂದಣಿ ತೆರೆಯುವ ಸಂಬಂಧ ಕಳುಹಿಸಬೇಕಿರುತ್ತದೆ.<br><br>(ಇ) ಪ್ರಾಧಿಕಾರವು ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡಿದ ಮೂರು ವರ್ಷಗಳ ಅವಧಿಯೊಳಗೆ ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಕಲಂ 17(2-A)ರಲ್ಲಿ ತಿಳಿಸಿರುವಂತೆ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಕುರಿತು ಪ್ರಾಧಿಕಾರವು ಸ್ಥಳ ಪರಿಶೀಲನೆ ಕೈಗೊಂಡು ಖಚಿತಪಡಿಸಕೊಳ್ಳಬೇಕಿರುತ್ತದೆ. ಒಂದು ವೇಳೆ, ಪ್ರಾಧಿಕಾರದಿಂದ ಅನುಮೋದನೆ ನೀಡಲಾದ ತಾತ್ಕಾಲಿಕ ವಿನ್ಯಾಸದ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯಲ್ಲಿ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳಿಸಬೇಕಾಗಿರುತ್ತದೆ.<br><br>(ಈ) ಪ್ರಾಧಿಕಾರವು ನಿಗಧಿಪಡಿಸಲಾದ ಅವಧಿಯಲ್ಲಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ನಂತರ, ಸಂಬಂಧಿತ ಇಲಾಖೆಗಳಿಂದ ಪ್ರಾಧಿಕಾರವು ನಿರಾಕ್ಷೇಪಣಾ ಪತ್ರಗಳನ್ನು ಪಡೆದು, ಸದರಿ ವಿಷಯದ ಕುರಿತು ಪ್ರಾಧಿಕಾರದ ಸಭೆಯಲ್ಲಿ |

| | | |
|---|---|---|
| | | ಚರ್ಚಿಸಿ, ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಉಳಿದ ಶೇ. 60ರಷ್ಟು ನಿವೇಶನಗಳನ್ನು (mortgage agreement ಮಾಡಿಕೊಳ್ಳಲಾದ ಮೂಲೆ ನಿವೇಶನಗಳ ಸೇರಿಸಿ) ಬಿಡುಗಡೆಗೊಳಿಸಲಾಗುತ್ತದೆ. ಸದರಿ ಅಂತಿಮ ಅನುಮೋದನೆ ನೀಡಲಾದ ವಿನ್ಯಾಸ ನಕ್ಷೆಯ ಒಂದು ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಸದರಿ ನಿವೇಶಗಳ ನೋಂದಣಿ ತೆರೆಯುವ ಸಂಬಂಧ ಕಳುಹಿಸಲಾಗುತ್ತದೆ.<br><br>ಮೇಲ್ಕಂಡಂತೆ ಎಲ್ಲಾ ವಿಧಾನಗಳನ್ನು ವಿನ್ಯಾಸ ಅನುಮೋದನೆ ನೀಡಲು ಸಂಬಂಧಪಟ್ಟ ಪ್ರಾಧಿಕಾರಗಳು ಅನುಸರಿಸಬೇಕಾಗುತ್ತದೆ. ಇದೇ ವಿಧಾನಗಳನ್ನು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲೂ ಸಹ ಅಳವಡಿಸಿಕೊಂಡು ಅನುಸರಿಸುತ್ತಿರುವುದರಿಂದ ಅನುಮೋದಿತ ಬಡಾವಣೆಗಳಿಗೆ ಅನುಮತಿ ನೀಡುವಲ್ಲಿ ಬಳ್ಳಾರಿ ನಗರಾಭಿವೃದಿ ಪ್ರಾಧಿಕಾರದಿಂದ ಯಾವುದೇ ವಿಳಂಬ ಆಗುತ್ತಿರುವುದಿಲ್ಲ. |
| ಆ) | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಬಡಾವಣೆಗಳ ಅನುಮೋದನೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಸಂಗ್ರಹಿಸಿದ ನಂತರವೂ ಕೂಡ ಖರೀದಿದಾರರು ನೀರು, ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳನ್ನು ಪಡೆಯಲು ತೊಂದರೆ ಅನುಭವಿಸುತ್ತಿರುವುದು ನಿಜವೇ; | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿ ಅಗತ್ಯ ಮೂಲಭೂತ ಸೌಕರ್ಯಗಳು ಅಭಿವೃದ್ಧಿಗೊಂಡ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲಾಗಿದ್ದು ಸದರಿ ವಸತಿ ವಿನ್ಯಾಸಗಳಲ್ಲಿ ಪಾಲಿಕೆಯಿಂದ ನೀರು ಮತ್ತು ಒಳಚರಂಡಿ ಸಂಪರ್ಕಗಳಿಗೆ ಅರ್ಜಿದಾರರಿಂದ ನಿಗಧಿತ ಶುಲ್ಕ ಭರಿಸಿಕೊಂಡು ನಿಯಮಾನುಸಾರ ಅನುಮತಿ ನೀಡಲಾಗುತ್ತಿದೆ. |
| ಇ) | ಜೆಸ್ಕಾಂ/ನಿಗಮದ ಕೇಬಲ್‌ಗಳ ಸಣ್ಣ ಪುಟ್ಟ ದುರಸ್ಥಿ ಮಾಡಲು ಸಹ ತರಬೇತಿ ಪಡೆದ ಸಿಬ್ಬಂದಿಗಳೇ ಇಲ್ಲದೆ ಸಂಬಂಧಪಟ್ಟ ಸಿಬ್ಬಂದಿಗಳ ಬಳಿ ಈ ಕೇಬಲ್‌ಗಳಿಗೆ ಸಂಬಂಧಿಸಿದ ತೀರಾ ಅಗತ್ಯವಿರುವ ಬಿಡಿ ಭಾಗಗಳೂ ಸಹ ಇರುವುದಿಲ್ಲ. ಹಾಗಾಗಿ ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ; | ಜೆಸ್ಕಾಂನ ಕಲಬುರಗಿ ಮತ್ತು ಬಳ್ಳಾರಿ ವಲಯ ವ್ಯಾಪ್ತಿಯಲ್ಲಿ ಕೇಬಲ್‌ಗಳ ನಿರ್ವಹಣೆ ಮತ್ತು ದುರಸ್ಥಿಗಾಗಿ ಅತ್ಯಾಧುನಿಕ ಸುಸಜ್ಜಿತ ಕೇಬಲ್ ಫಾಲ್ ಡಿಟೆಕ್ಟ್‌ರ್‌ನ ಪ್ರತ್ಯೇಕವಾದ 2 ವಾಹನಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಅಲ್ಲದೇ ಸದರಿ ಕೇಬಲ್ ದುರಸ್ಥಿ ಕೆಲಸಕ್ಕೆ ಪ್ರತ್ಯೇಕವಾಗಿ ತರಬೇತಿ ಪಡೆದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಹಾಗೂ ಕೇಬಲ್ ನಿರ್ವಹಣೆಗಾಗಿ ಬಿಡಿ ಭಾಗಗಳು ಲಭ್ಯವಿದ್ದು ಅವಶ್ಯವಿರುವ ಹೆಚ್ಚುವರಿ ಬಿಡಿಭಾಗಗಳನ್ನು ಪಡೆದುಕೊಳ್ಳಲು ಸಂಬಂಧಿತ ವಿಭಾಗಾಧಿಕಾರಿಯವರಿಗೆ ಪ್ರತ್ಯಾಯೋಜನೆ ನೀಡಲಾಗಿದೆ. |
| ಈ) | ಆರ್.ಎಸ್., ಜಮೀನುಗಳು ಮತ್ತು ಎನ್ .ಎ., ಜಮೀನುಗಳಲ್ಲಿನ ಅನಧಿಕೃತ ಬಡಾವಣೆಗಳಲ್ಲಿರುವ ನಿವೇಶನಗಳಿಗೆ 'ಬಿ' | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (BUDA) ಅನುಮೋದಿತ ವಸತಿ ವಿನ್ಯಾಸಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು ಅಭಿವೃದ್ಧಿಗೊಂಡ ಬಗ್ಗೆ, |

| | | |
|---|---|---|
| | ಖಾತಾ ಮತ್ತು ನೀರು, ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳೊಂದಿಗೆ ನಿವೇಶನದ ನಕ್ಷೆಯನ್ನು ನೀಡಲಾಗುತ್ತಿದೆ. ಅದರೆ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅನುಮೋದಿತ ಬಡಾವಣೆಗಳಲ್ಲಿನ ನಿವೇಶನಗಳಿಗೆ ಮೂಲಭೂತ ಸೌಕರ್ಯಗಳಿಲ್ಲದಿರುವ ಕಾರಣಗಳೇನು; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ? | ಖಚಿತಪಡಿಸಿಕೊಂಡ ನಂತರವೇ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. ದಿನಾಂಕ:**01.11.2023** ರಿಂದ ಇಲ್ಲಿಯವರೆಗೂ ಒಟ್ಟು 32 ಲೇಔಟಗಳನ್ನು ಪಾಲಿಕೆಗೆ ಹಸ್ತಾಂತರಿಸಲಾಗಿದೆ.<br><br>• ಕುಡಿಯುವ ನೀರು ಮತ್ತು ಒಳಚರಂಡ ವ್ಯವಸ್ಥೆಯ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಳ್ಳಾರಿ ರವರಿಂದ ಕೈಗೊಂಡು ತೃಪ್ತಿಕರವಾಗಿ ಪೂರೈಸಿದ ನಂತರ ನಕ್ಷೆಯೊಂದಿಗೆ ಜಂಟಿ ತಪಾಸಣೆ ಕೈಗೊಂಡ ನಂತರವೇ ಹಸ್ತಾಂತರಿಸಿಕೊಳ್ಳಲಾಗುತ್ತಿದೆ.<br><br>• ವಿದ್ಯುತ್ ಸಂಬಂಧಿಸಿದ ಕಾಮಗಾರಿಗಳನ್ನು ಹಾಗೂ ನಿರ್ವಹಣೆಯನ್ನು ಜೆಸ್ಕಾಂ ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ.<br><br>• ಈಗಾಗಲೇ ಬಳ್ಳಾರಿ ಮಹಾನಗರ ಪಾಲಿಕೆಗೆ ಹಸ್ತಾಂತರಗೊಂಡ **BUDA** ಅನುಮೋದಿತ ವಸತಿ ವಿನ್ಯಾಸಗಳಲ್ಲಿ ವಸತಿ ಕಟ್ಟಡಗಳು ನಿರ್ಮಾಣಗೊಂಡ ನಂತರ ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ನೀಡಲಾಗುತ್ತಿದೆ. ಮತ್ತು ಕಾಲಕಾಲಕ್ಕೆ ಅಗತ್ಯತೆಯ ಮೇರೆಗೆ ನಿರ್ವಹಣೆ ಕೈಗೊಳ್ಳಲಾಗುತ್ತಿದೆ.<br><br>• ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವ ಬಗ್ಗೆ ಸಂಬಂಧಿಸಿದ ಇಲಾಖೆಗಳಿಂದ ದೃಢೀಕರಣ ಪತ್ರ ಪಡೆದು **BUDA** ದಿಂದ ಸದರಿ ಬಡಾವಣೆಗಳನ್ನು ಪಾಲಿಕೆಗೆ ಹಸ್ತಾಂತರಿಸುತ್ತಾರೆ. ಹಸ್ತಾಂತರಿಸಿಕೊಳ್ಳುವಾಗ ಈವರೆಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವ ಸನ್ನಿವೇಶಗಳು ಕಂಡುಬಂದಿರುವುದಿಲ್ಲ. |

ಸಂಖ್ಯೆ : ನಅಇ 152 ಗುಅಪ್ರಾ 2025

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು